# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿಸಿಡಿ/837/2015/ಅ.ನಿ.ವಿ-9

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:02.02.2017.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ಶ್ರೀ.ಶಂಕರಮೂರ್ತಿ, ಸಹಾಯಕ ಅಭಿಯಂತರರು, ಮತ್ತು ಶ್ರೀ.ಶಿವಾನಂದ, ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಪಶ್ಚಿಮ ಉಪವಿಭಾಗ, ವಿಜಯನಗರ, ಬೆಂಗಳೂರು ರವರ ವಿರುದ್ದ ಸಲ್ಲಿಸಿದ ದೂರಿನ ಕುರಿತು.

****

1. ಶ್ರೀ.ಹೆಚ್.ಕೆ.ಗೌಡಯ್ಯ, ಬೆಂಗಳೂರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ), ಇವರು ಶ್ರೀ.ಶಂಕರಮೂರ್ತಿ, ಸಹಾಯಕ ಅಭಿಯಂತರರು, ಮತ್ತು ಶ್ರೀ.ಶಿವಾನಂದ, ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಪಶ್ಚಿಮ ಉಪವಿಭಾಗ, ವಿಜಯನಗರ, ಬೆಂಗಳೂರು (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ.9ರಡಿಯಲ್ಲಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. ಈ ಪ್ರಕರಣದ ದೂರುದಾರಾದ – ಹೆಚ್.ಕೆ ಗೌಡಯ್ಯ, ಬೆಂಗಳೂರು ಇವರು ತಮ್ಮ ದೂರಿನಲ್ಲಿ ವಿಶ್ವೇಶ್ವರಯ್ಯ ಲೇಔಟ್, 3ನೇ ಬ್ಲಾಕ್‌ನಲ್ಲಿ ನಿವೇಶನ ಸಂ. 56 ರಿಂದ 74 ರಲ್ಲಿ ಕೈಗೊಂಡಿರುವ ಕಾಂಕ್ರೀಟ್ ಕೆಲಸಗಳು ಕಳಪೆಯಾಗಿದೆಯೆಂದು ಎದುರುದಾರರಾದ – ಶ್ರೀ.ಶಂಕರಮೂರ್ತಿ, ಸಹಾಯಕ ಅಭಿಯಂತರರು, ಮತ್ತು ಶ್ರೀ.ಶಿವಾನಂದ, ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಪಶ್ಚಿಮ ಉಪವಿಭಾಗ, ವಿಜಯನಗರ, ಬೆಂಗಳೂರು ಇವರ ವಿರುದ್ಧ ಆರೋಪಿಸಿರುತ್ತಾರೆ.

3. ಈ ದೂರಿನ ಆರೋಪಗಳ ಬಗ್ಗೆ ತನಿಖೆ ಮಾಡಿ ವರದಿ ಸಲ್ಲಿಸಲು ಮುಖ್ಯ ಅಭಿಯಂತರರು, ಕರ್ನಾಟಕ ಲೋಕಾಯುಕ್ತ ರವರಿಗೆ ಕಳುಹಿಸಿದ್ದು, ನಂತರ ಸಿಇರವರು ಹೆಚ್.ಎಸ್.ಸುಧೀಂದ್ರ, ಸಹಾಯಕ ಕಾರ್ಯಪಾಲಕ ಅಭಿಯಂತರರು, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ ಇವರಿಗೆ ಕಡತವನ್ನು ವಹಿಸಿ ದೂರನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸಲು ಸೂಚಿಸಿದ ಮೇರೆಗೆ ವರದಿಯನ್ನು ಸಲ್ಲಿಸಿರುತ್ತಾರೆ.

4. ತನಿಖಾಧಿಕಾರಿಯವರು ತನಿಖೆಗೆ ಅಗತ್ಯವಾದ ಅಪಾದಿತ ಕಾಮಗಾರಿಗಳ ಅಂದಾಜು ಪಟ್ಟಿ, ಅಳತೆ ಪುಸ್ತಕ, ಗುತ್ತಿಗೆಯ ಕರಾರು, ಗುಣ ನಿಯಂತ್ರಣ ವರದಿ, ಕಾಮಗಾರಿಯ ನಿರ್ವಾಹಣಾ ಹಂತದಲ್ಲಿನ ಕಾಮಗಾರಿಯ ಛಾಯಚಿತ್ರಗಳು ಮತ್ತು ಕಾಮಗಾರಿಗಳನ್ನು ನಿರ್ವಹಿಸಿದ ಅಧಿಕಾರಿಗಳ ವಿವರಗಳನ್ನು ಪಡೆದುಕೊಂಡು ದೂರುದಾರರು ಹಾಗೂ ಸಂಬಂಧಪಟ್ಟ ಅಭಿಯಂತರರಿಗೆ ದಿನಾಂಕ: 22-6-2015 ರಂದು ಸ್ಥಳದಲ್ಲಿ ದಾಖಲಾತಿಯೊಂದಿಗೆ ಹಾಜರಿರಬೇಕೆಂದು ಸೂಚಿಸಿರುತ್ತಾರೆ.

5. ದಿನಾಂಕ: 22-6-2015 ರಂದು ಸ್ಥಳದಲ್ಲಿ ನಿರ್ವಹಿಸಿದ ಆರ್.ಸಿ.ಸಿ ಚರಂಡಿಗಳ ಅಳತೆಗಳನ್ನು ಪರಿಶೀಲಿಸಲಾಗಿ 90% ಕಾಮಗಾರಿಗಳು ಪೂರ್ಣಗೊಂಡಿದ್ದು ಕಾಂಕ್ರೀಟ್ ಕೆಲಗಳನ್ನು ಪರೀಕ್ಷಿಸಿ ಫಲಿತಾಂಶದ ವರದಿ ನೀಡಲು ಎದುರುದಾರರ ಮೂಲಕ ಸಿವಿಲ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಕಳುಹಿಸಿದ್ದು ಅದರಂತೆ ಸದರಿಯವರು ಲಭ್ಯತೆಗೆ ಅನುಗುಣವಾಗಿ ಸ್ಯಾಂಪಲ್‌ಗಳನ್ನು ತೆಗೆದುಕೊಂಡರು ಆರ್.ಸಿಸಿ ಚರಂಡಿಗಳನ್ನು ಪರಿಶೀಲಿಸಿದಾಗ ಎಡ ಬಾಗದ ಚರಂಡಿಯ ಒಟ್ಟು ಉದ್ದ 244.09 ಮೀಟರ್ ಮತ್ತು ಅಗಲ 1.20 ಮೀ. ಬಲಬಾಗದ ಉದ್ದ 227 ಮೀ. ಇದ್ದು ಅದರಲ್ಲಿ 159.40 ಮೀ. ಉದ್ದದ ಬಾಗದಲ್ಲಿ ಬಿಎಸ್. ಸ್ಲಾಬ್ ಬೆಡ್ ಇರುತ್ತದೆ. ಸದರಿ ಚರಂಡಿಗಳಿಗೆ ರಿವರ್ಸ ಸ್ಲೋಪ್ ನೀಡಿರುವುದಾಗಿ ಎದುರುದಾರರು ನುಡಿದಿರುತ್ತಾರೆ ಎಡ ಚರಂಡಿಯ ಉದ್ದದಲ್ಲಿ 1:4:8 ಬೆಡ್ ಕಾಂಕ್ರೀಟ್ ಪರಿಶೀಲಿಸಿದಾಗ 20 ಸೆ.ಮೀ ದಪ್ಪ ಇದ್ದು ಈ ಕಾಮಗಾರಿಗಳನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿದ್ದು ಸ್ಥಳದಲ್ಲಿನ ಅಳತೆಗಳು ದಾಖಲಿಸಿರುವ ಅಳತೆಗಳಿಗೆ ತಾಳೆಯಾಗಿರುತ್ತದೆ. ಇದೇ ರೀತಿಯಾಗಿ ಚರಂಡಿಗಳನ್ನು ಮುಂದುವರೆಸಿ ಅಗತ್ಯವಾದ ಸ್ಲೋಪ್/ ಗ್ರೇಡಿಯಂಟ್ ಅಳವಡಿಸಿ ಕೆಲಸ ನಿರ್ವಹಿಸಲು ಅವಕಾಶವಿಲ್ಲದಿದ್ದ ಕಾರಣ ರಿವರ್ಸ ಸ್ಲೋಪ್ ನೀಡಲಾಗಿರುತ್ತದೆ ಎಂದು ಎದುರುದಾರರು ತಿಳಿಸಿರುತ್ತಾರೆ.

6. ಮೇಲೆ ಹೇಳಿದಂತೆ ಆರ್.ಸಿಸಿ ಚರಂಡಿಯ ಸ್ಯಾಂಪಲ್‌ಗಳನ್ನು ತೆಗೆದು ಗುಣಮಟ್ಟ ಪರೀಕ್ಷೆ ಫಲಿತಾಂಶದ ವರದಿಯನ್ನು ಕೈಗೊಳ್ಳಲು ಕೆಇಆರ್.ಎಸ್ ಕೆ ಆರ್. ಸಾಗರದ ತಾಂತ್ರಿಕ ಅಧಿಕಾರಿಗಳು ಯಂತ್ರಗಳ ಸಹಾಯದಿಂದ ಸಂಗ್ರಹಿಸಿದ್ದು ವರದಿಯನ್ನು ಷರಾ ಕಾಲಂನಲ್ಲಿ ಈ ರೀತಿಯಾಗಿ ನಮೂದಿಸಿರುತ್ತಾರೆ.

As per clause 17.43 and Table 11 of IS 456:2000 the results obtained from the tents conducted on core samples satisfy the requirements for M.20 Grade of concrete.

7. ಈ ರೀತಿಯಾಗಿ ತನಿಖೆಯನ್ನು ಕೈಗೊಂಡು ಪೂರ್ಣಗೊಂಡಿದ್ದ ರಸ್ತೆಯ ಚರಂಡಿ ಕಾಂಕ್ರೀಟ್ ಒಡೆದಿರುವುದರಿಂದ ತಡೆ ಗೋಡೆಯಲ್ಲಿ ತೂತುಗಳಾಗಿದ್ದು ಶಕ್ತಿಯು ಕುಂದಿರಬಹುದು ಎಂದು ವರದಿಯನ್ನು ನೀಡಿರುತ್ತಾರೆ.

8. ತನಿಖಾಧಿಕಾರಿಯವರು ದಿನಾಂಕ: 9-6-2016 ರಂದು ತಯಾರಿಸಿದ ಮಹಜರ್‌ನಲ್ಲಿ ದೂರುದಾರರು, ಎದುರುದಾರರು ಹಾಗೂ ಸ್ಥಳೀಯ ನಿವಾಸಿಗಳು ರುಜುಗಳನ್ನು ಹಾಕಿರುತ್ತಾರೆ. ವಿಶ್ವೇಶ್ವರಯ್ಯ ಲೇಔಟ್‌ನ 3ನೇ ಬ್ಲಾಕಿನ ಲೇಔಟ್ ನಕ್ಷೆಯನ್ನು ಸ್ಯಾಂಪಲ್ ತೆಗೆದ ಸಿಮೆಂಟ್ ಕಾಂಕ್ರೀಟ್ ಕೋರ್ ಟೆಸ್ಟ ರಿಪೋರ್ಟನ್ನು ಮತ್ತು ಛಾಯಾ ಪ್ರತಿಗಳನ್ನು ಹಾಜರು ಪಡಿಸಿರುತ್ತಾರೆ.

9. ತನಿಖಾಧಿಕಾರಿಯವರ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ತನಿಖಾಧಿಕಾರಿಯವರು ಕಾಂಕ್ರೀಟ್ ಕಾಮಗಾರಿ ನಿವೇಶನ ಸಂ 56 ರಿಂದ 74 ರವರೆಗೆ ಕಾಮಗಾರಿ ಕೆಲಸ ಗುಣಮಟ್ಟದ್ದಾಗಿದ್ದು ಕೋರ್ ಸ್ಯಾಂಪಲ್ ತೆಗೆದಿರುವುದರಿಂದ ತಡೆ ಗೋಡೆಗಳಲ್ಲಿ ತೂತುಗಳಾಗಿದ್ದು, ಸದರಿ ತೂತುಗಳನ್ನು ಮುಚ್ಚದೆ ಇದ್ದರೆ ನೀರು ತೂತುಗಳಲ್ಲಿ ಹರಿದು ಅಕ್ಕ ಪಕ್ಕದಲ್ಲಿ ತಡೆಯಾಗುತ್ತದೆ. ಆದ್ದರಿಂದ ತೂತುಗಳನ್ನು ಮುಚ್ಚುವ ಕೆಲಸವನ್ನು ಎದುರುದಾರರು ಮಾಡಬೇಕಾಗಿರುತ್ತದೆ.

10. ಆದುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

"ಕಾಂಕ್ರೀಟ್ ಕಾಮಗಾರಿ ನಿವೇಶನ ಸಂ 56 ರಿಂದ 74 ರವರೆಗೆ ಕಾಮಗಾರಿ ಕೆಲಸ ಗುಣಮಟ್ಟದ್ದಾಗಿದ್ದು ಕೋರ್ ಸ್ಯಾಂಪಲ್ ತೆಗೆದಿರುವುದರಿಂದ ತಡೆ ಗೋಡೆಗಳಲ್ಲಿ ತೂತುಗಳಾಗಿದ್ದು, ಸದರಿ ತೂತುಗಳನ್ನು ಮುಚ್ಚದೆ ಇದ್ದರೆ ನೀರು ತೂತುಗಳಲ್ಲಿ ಹರಿದು ಅಕ್ಕ ಪಕ್ಕದಲ್ಲಿ ತಡೆಯಾಗುತ್ತದೆ. ಆದ್ದರಿಂದ ತೂತುಗಳನ್ನು ಮುಚ್ಚುವ ಕೆಲಸವನ್ನು ಎದುರುದಾರರು ಮಾಡಬೇಕಾಗಿರುತ್ತದೆ".

11. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಎನ್. ಆನಂದ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.